# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 45/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಬಸವಲಿಂಗಸ್ವಾಮಿ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಶ್ರೀ ಮರಿಬಸಪ್ಪ | | **03.10.2023** |
| **ವಯಸ್ಸು** | ಃ **58 ವರ್ಷ** | | |
| **ವೃತ್ತಿ** | ಃ ಸಂಸ್ಕೃತ ಶಿಕ್ಷಕ | | **ಪ್ರಾ.ಸಾ. ಃ 02** |
| **ವಾಸಸ್ಥಳ** | ಃ ಅಗ್ರಹಾರ | | **ಚಾ.ಸಾ. ಃ 03** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ***1999*** ರಲ್ಲಿ ವಿಶ್ವ ಚೇತನ ಸಂಸ್ಕೃತ ಪಾಠಶಾಲೆಯಲ್ಲಿ ಶಿಕ್ಷಕನಾಗಿ ಕೆಲಸಕ್ಕೆ ಸೇರಿದ್ದೆ. ಆ ಕಾಲಕ್ಕೆ ನಾನು ಸಂಸ್ದೆಗೆ ಹಣವನ್ನು ಕೊಡಲು ಆಗದೇ ಇದ್ದ ಕಾರಣ ಮತ್ತು ಮಾಸಿಕ ***1,500/-*** ರೂಪಾಯಿ ಹಣ ಸಾಲದೇ ಇದ್ದ ಕಾರಣ ***1*** ವರ್ಷದ ಬಳಿಕ ಆ ಕೆಲಸ ಬಿಟ್ಟು ಬೆಂಗಳೂರಿಗೆ ಹೋಗಿ ಯೋಗ ಶಿಕ್ಷಕನಾಗಿ ಕೆಲಸ ಮಾಡಲು ಸೇರಿಕೊಂಡಿದ್ದೆ. ನಂತರ ***2015*** ರಲ್ಲಿ ***4*** ನೇ ಆರೋಪಿ ಕೆ.ವಿಶ್ವನಾಥ ಇವರು ವಿಶ್ವ ಚೇತನ ಶಾಲೆಯಲ್ಲಿ ಶಿಕ್ಷಕರಾಗಿದ್ದು ಅವರು ಶಾಲೆ ಪುನಃ ಪ್ರಾರಂಭವಾಗುತ್ತಿದೆ ಮತ್ತು ನಿವೃತ್ತಿ ವೇತನಕ್ಕೆ ಅವಕಾಶ ಇದೆ ಎಂದು ನನ್ನನ್ನು ವಾಪಸ್ಸು ಕರೆದಿದ್ದರಿಂದ ನಾನು ವಾಪಸ್ಸು ಬಂದು ***2015*** ರಿಂದ ವಿಶ್ವ ಚೇತನ ಸಂಸ್ಕೃತ ಪಾಠಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮುಂದುವರೆಸಿದ್ದೆ. ಆ ಕಾಲಕ್ಕೆ ***3*** ವರ್ಷದ ಬಾಕಿ ವೇತನ ನನಗೆ ಸಂದಾಯವಾಗಿತ್ತು. ಆ ಬಾಕಿ ವೇತನ ಅಂದಾಜು ***5*** ರಿಂದ ***5 ½*** ಲಕ್ಷ ಬಂದಿತ್ತು. ಆ ಹಣವನ್ನು ನಾನು ಸ್ವಂತಕ್ಕೆ ಬಳಸದೇ ಸಂಸ್ದೆಯ ಕಟ್ಟಡಕ್ಕೆ ಎಂದು ಮುಖ್ಯ ಶಿಕ್ಷಕರಾದ ವಿಶ್ವನಾಥ ಇವರಿಗೆ ಕೊಟ್ಟಿದ್ದೆ. ***2018*** ರಿಂದ ನಮಗೆ ಪೂರ್ಣ ಸಂಬಳ ಬರುತ್ತಿತ್ತು. ಆ ನಂತರವೂ ನಾವು

ತಿಂಗಳಿಗೆ 15-20 ಸಾವಿರಗಳನ್ನು ಸಂಸ್ಥೆಯ ಉಪಯೋಗಕೊಸ್ಕರ 5ನೇ ಆರೋಪಿತ ಪರಶಿವ.ಪಿ ಇವರ ಮೂಲಕ 4ನೇ ಆರೋಪಿತ ವಿಶ್ವನಾಥ ಇವರಿಗೆ ಕೊಡುತ್ತಿದ್ದೆ. ಈ ಹಂತದಲ್ಲಿ ಶಾಲೆಯ ಕುರಿತಾದ ಸಭೆಗಳಿಗೆ ನಾನು ಹಾಜರಾಗುತ್ತಿದ್ದೆ.

2. ಆ ಸಭೆಗಳ ಕಾಲಕ್ಕೆ ಸಂಸ್ಥೆಯ ಕಾರ್ಯದರ್ಶಿ ಆಗಿದ್ದ ಪರಶಿವಮೂರ್ತಿ ಯವರಿಗೂ 4ನೇ ಆರೋಪಿತ ವಿಶ್ವನಾಥ ಇವರಿಗೂ ಹಣಕಾಸಿನ ಕುರಿತಾದ ಮಾತಿನ ಚಕಮಕಿ ನಡೆಯುತ್ತಿತ್ತು. ಸಭೆ ನಡೆದಾಗ ಪರಶಿವಮೂರ್ತಿಯವರು ನೀವೆಲ್ಲಾ ಹಣ ಸರಿಯಾಗಿ ಪಾವತಿ ಮಾಡಬೇಕು ಎಂದು ಹೇಳುತ್ತಿದ್ದರು. ನನಗೆ ತಿಂಗಳಿಗೆ 15-20 ಸಾವಿರ ರೂಪಾಯಿ ಪಾವತಿಸುವಂತೆ ಹೇಳುತ್ತಿದ್ದರು ನಾನು 5ನೇ ಆರೋಪಿತ ಪರಶಿವ.ಪಿ ಇವರ ಮೂಲಕ ಆ ಹಣವನ್ನು ಪಾವತಿಸುತ್ತಿದ್ದೆ. ಆ ರೀತಿ ಸಭೆ ನಡೆದಾಗ ಇನ್ನು ಹೆಚ್ಚಿನ ಹಣ ಕೊಡಬೇಕು ಎಂದು ಹೇಳಿದಾಗ ನಾವು ಅಷ್ಟ ಆಗುವುದಿಲ್ಲ ಎಂದು ಹೇಳಿದ್ದೆವು. ಈ ರೀತಿ ನಡೆದಾಗ ಒಂದು ದಿನ ಪರಶಿವಮೂರ್ತಿ ಯವರ ಕೊಲೆಯಾದ ಸುದ್ದಿ ಪೇಪರ್ ನಲ್ಲಿ ನೋಡಿ ಗೊತ್ತಾಗಿತ್ತು. ಆ ಕಾಲಕ್ಕೆ ಅವರ ಕೊಲೆ ಯಾರು ಮಾಡಿದ್ದಾರೆ ಎಂದು ಗೊತ್ತಾಗಿರಲಿಲ್ಲ. ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನಂತರ ಪರಶಿವಮೂರ್ತಿ ಇವರ ಕೊಲೆ ನಡೆದು ಅಂದಾಜು 1 ರಿಂದ 1 ½ ತಿಂಗಳು ನಂತರ ದೂರದರ್ಶನದಲ್ಲಿ ನೋಡಿದಾಗ ಕೊರ್ಟ್ ಮುಂದೆ ಇರುವ ಆರೋಪಿತರು ಪರಶಿವಮೂರ್ತಿ ಇವರ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಸಭೆಗಳು ನಡೆದಾಗ ಪರಶಿವಮೂರ್ತಿ ಅವರು ಅಲ್ಲಿಂದ ಹೋದ ಬಳಿಕ ಅಲ್ಲಿ ಏನು ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನ್ಯಾಯಾಧೀಶರ ಮುಂದೆಯೂ ಸಹ ನಾನು ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರ ಮೇಲಿನ ಸಹಿ ನನ್ನದೇ ಇದೆ. ಸದರಿ ಹೇಳಿಕೆಯನ್ನು

ನಿ.ಪಿ–*34* ಮತ್ತು ಸಹಿಗಳನ್ನು ನಿ.ಪಿ–*34(ಎ)* ಮತ್ತು *34(ಬಿ)* ಎಂದು ಗುರುತಿಸಿದೆ. ತನಿಖೆ ಕಾಲಕ್ಕೆ ನಾನು ಸಂಸ್ಥೆಯ ಮಾನ್ಯತಾ ಪತ್ರ, ಚೆಕ್ ಲಿಸ್ಟ್, ಸರ್ವ ಸದಸ್ಯರ ಪಟ್ಟಿ, ವೇತನ ಬಿಡುಗಡೆ ಆದೇಶ, ಮುಂತಾದ ದಾಖಲೆಗಳನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆಗಳು ಅವೇ ಇರುತ್ತವೆ. ಸದರಿ ದಾಖಲೆಗಳನ್ನು ನಿ.ಪಿ–*35* ರಿಂದ *41* ಎಂದು ಗುರುತಿಸಿದೆ. *3* ನೇ ಆರೋಪಿತ ಸಿದ್ದರಾಜು ಇವರು ಆಗಾಗ ಸಂಸ್ಕೃತ ಸಭೆಗಳಲ್ಲಿ ಭೇಟಿಯಾಗಿದ್ದರಿಂದ ಅವರ ಪರಿಚಯ ಇದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*3.* ಬಾಲಚಂದ್ರ ಹೆಗ್ಡೆ ಯವರು ಪರಶಿವಮೂರ್ತಿಯವರಿಗೆ ಹಣ ಕೊಡದೇ ಇದ್ದುದ್ದರಿಂದ ಪರಶಿವಮೂರ್ತಿಯವರು ಅವರನ್ನು ಗೈರು ಹಾಜರಿ ತೋರಿಸಿ ಅವರ ಸಂಬಳ ನಿಲ್ಲಿಸಿ *2019* ರ ಜೂನ್ ಜುಲೈನಲ್ಲಿ ಅವರನ್ನು ಮೈಸೂರಿನ ವಿಶ್ವಚೇತನ ಸಂಸ್ಕೃತ ಪಾಠಶಾಲೆಯಿಂದ ಟಿ.ನರಸೀಪುರ ವಿಶ್ವಚೇತನ ಸಂಸ್ಕೃತ ಪಾಠಶಾಲೆಗೆ ಮತ್ತು ನನ್ನನ್ನು ಟಿ.ನರಸೀಪುರ ವಿಶ್ವಚೇತನ ಸಂಸ್ಕೃತ ಪಾಠಶಾಲೆಯಿಂದ ಮೈಸೂರಿನ ವಿಶ್ವಚೇತನ ಸಂಸ್ಕೃತ ಪಾಠಶಾಲೆಗೆ ವರ್ಗಾವಣೆ ಮಾಡಿದ್ದರು ಎಂದರೆ ನಿಜ. ಶಿಕ್ಷಕರು ತಮ್ಮ ಸಂಬಳದಲ್ಲಿ ಹಣವನ್ನು ಕೊಡದೇ ಇದ್ದರೆ ಪರಶಿವಮೂರ್ತಿಯವರು ಎಲ್ಲಾ ಶಿಕ್ಷಕರನ್ನು ನಾಯಿಗಳನ್ನು ಕಾಣುವಂತೆ ನಡೆಸಿಕೊಳ್ಳುತ್ತಿದ್ದರು ಮತ್ತು ಬೈಯುತ್ತಿದ್ದರು ಎಂದರೆ ನಿಜ. ಸಭೆ ನಡೆದಾಗ ವಿಶ್ವನಾಥ ಮತ್ತು ಪರಶಿವ ಇವರಿಗೆ ನಿಮ್ಮ ರಿಟೈರ್ ಮೆಂಟ್ ಹಣವನ್ನು ಸಂಸ್ಥೆಗೆ ನೀಡಿ ಎಂದು ಕಿರುಕುಳ ಕೊಡುತ್ತಿದ್ದರು ಮತ್ತು ಹಣಕೊಡದೇ ಇದ್ದ ಶಿಕ್ಷಕರಿಗೆ ಅವಾಚ್ಯ ಶಬ್ದಗಳಿಂದ

ಬೈಯುತ್ತಿದ್ದರು ಎಂದರೆ ನಿಜ. ಸಭೆ ಮುಗಿದು ಪರಶಿವಮೂರ್ತಿಯವರು ಹೋದ ಮೇಲೆ 4 ನೇ ಆರೋಪಿತ ವಿಶ್ವನಾಥ ಇವರು ಎಲ್ಲರ ಮುಂದೆ ಪರಶಿವಮೂರ್ತಿಯನ್ನು ಕೊಲೆ ಮಾಡದೇ ಇದ್ದರೇ ಸರಿಯಾಗುವುದಿಲ್ಲ ಇವರನ್ನು ಮುಗಿಸಬೇಕು ಆಗ ಎಲ್ಲರ ಸಮಸ್ಯೆಗೆ ಪರಿಹಾರ ಸಿಗುತ್ತದೆ ಮತ್ತು ಎಲ್ಲರು ನೆಮ್ಮದಿಯಾಗಿರಬಹುದು ಎಂದು ಹೇಳುತ್ತಿದ್ದರು ಮತ್ತು ನಾವೆಲ್ಲ ಅವರಿಗೆ ಸಮಾಧಾನ ಮಾಡುತ್ತಿದ್ದೆವು ಎಂದರೆ ನಿಜ.

4. 2020 ರ ಜೂನ್ ತಿಂಗಳಿನಲ್ಲಿ ನೀಲಕಂಠ ಸ್ವಾಮಿ ಮಠದಲ್ಲಿ ಟ್ರಸ್ಟ್ ನ ಸಭೆ ನಡೆದಾಗ ಪರಶಿವಮೂರ್ತಿ ಇವರು 4 ನೇ ಆರೋಪಿತ ವಿಶ್ವನಾಥ ಇವರಿಗೆ ನಮ್ಮ ಸಂಸ್ಥೆಗೆ ಸ್ವಂತ ಬಿಲ್ಡಿಂಗ್ ಇಲ್ಲ ಎಲ್ಲಾದರೂ ಜಾಗ ತೆಗೆದುಕೊಂಡು ಸ್ವಂತ ಬಿಲ್ಡಿಂಗ್ ಕಟ್ಟೋಕೆ ಹಣ ಬೇಕು ನೀವು ಕೊಡಿ ಎಂದು ಕೇಳಿದಾಗ ವಿಶ್ವನಾಥ ಇವರು ನಿನ್ನ ಕಿರುಕುಳ ಜಾಸ್ತಿಯಾಯಿತು ಬೋಳಿ ಮಗನೇ ನಿನ್ನ ಮನೆಗೆ ಬಂದು ನಿನಗೆ ರಾಡಿನಲ್ಲಿ ಹೊಡೆದು ಕೊಲೆ ಮಾಡುತ್ತೇನೆ ನಿನ್ನನ್ನು ಉಳಿಸುವುದಿಲ್ಲ ಎಂದು ಕೂಗಾಡಿದ್ದರು ಆ ಕಾಲಕ್ಕೆ ನಾನು ಮತ್ತು ಪರಶಿವ.ಪಿ ಮತ್ತು ಬಾಲಚಂದ್ರ ಹೆಗ್ಡೆ ಮತ್ತು ಇತರರು ವಿಶ್ವನಾಥ ಇವರನ್ನು ಸಮಾಧಾನ ಮಾಡಿದ್ದೇವು ಎಂದರೆ ನಿಜ. ಆ ಕಾಲಕ್ಕೆ ಅಧ್ಯಕ್ಷರಾದ ನಾಗರಾಜು ಇವರು ಪರಶಿವಮೂರ್ತಿಯನ್ನು ಸಮಾಧಾನ ಮಾಡಿದ್ದರು ಎಂದರೆ ನಿಜ. ನಂತರ 4 ಮತ್ತು 5 ನೇ ಆರೋಪಿತರು ಪರಶಿವಮೂರ್ತಿಯವರು ನೀಡುತ್ತಿದ್ದ ಕಿರುಕುಳವನ್ನು ತಾಳಲಾರದೇ ಅವರ ಸ್ನೇಹಿತರಾದ ಮಡಿವಾಳಸ್ವಾಮಿ ಸಂಸ್ಕೃತ ಪಾಠಶಾಲೆ ಶಿಕ್ಷಕ ಸಿದ್ದರಾಜು ಮತ್ತು ಇತರರೊಂದಿಗೆ ಸೇರಿಕೊಂಡು ಪರಶಿವಮೂರ್ತಿಯವರನ್ನು ಕೊಲೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಾಗಿತ್ತು ಎಂದರೆ ನಿಜ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ನಿ.ಪಿ–34 ರ ಹೇಳಿಕೆ ಕಾಲಕ್ಕೂ ಸಹ ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

<u>ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*5.* ದಿಃ*21.09.2020* ರಂದು ದಿನಪತ್ರಿಕೆಗಳಲ್ಲಿ ಪರಶಿವಮೂರ್ತಿಯವರ ಕೊಲೆ ಸುದ್ದಿ ಪ್ರಕಟಗೊಂಡಾಗ ನನಗೆ ಆ ಬಗ್ಗೆ ಗೊತ್ತಾಗಿತ್ತು. ಆ ದಿನ ನಾನು ನಿವೇದಿತ ನಗರದ ಪರಶಿವಮೂರ್ತಿಯವರ ಮನೆಗೆ ಹೋಗಿರಲಿಲ್ಲ ನೇರವಾಗಿ ರುದ್ರಭೂಮಿಗೆ ಹೋಗಿ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದೆ. ಆ ದಿನ ನಾನು ಆಸ್ಪತ್ರೆಗೂ ಸಹ ಹೋಗಿರಲಿಲ್ಲ. ದಿಃ*21.09.2020* ರಿಂದ *04.11.2020* ರ ವರೆಗೆ ನಾನು ಮೈಸೂರಿನಲ್ಲೇ ಇದ್ದೆ. ಶಾಲೆಯ ವಿಚಾರಕ್ಕೆ ಪರಶಿವಮೂರ್ತಿ ಯವರಿಗೂ ಮತ್ತು ಶಾಲೆಯ ಶಿಕ್ಷಕರಿಗೂ ಗಲಾಟೆ ಆಗಿದ್ದ ಬಗ್ಗೆ ನಾನು ಪೋಲೀಸರಿಗೆ ಹೇಳಿಲ್ಲ ಎಂದರೆ ನಿಜ. ಜೂನ್ *2020* ರಲ್ಲಿ ನಡೆದ ಸಭೆ ಕಾಲಕ್ಕೆ ಆಗಿದ್ದ ಗಲಾಟೆಯನ್ನು ಸಹ ನಾನು ಪೋಲೀಸರಿಗೆ ಹೇಳಿಲ್ಲ ಎಂದರೆ ನಿಜ. ಆ ಬಗ್ಗೆ ಹೇಳಬೇಕು ಎಂದು ನನಗೆ ಅನಿಸಿರಲಿಲ್ಲ. ದಿಃ*07.12.2020* ರಂದು ಪೋಲೀಸರು ಕರೆದಿದ್ದರಿಂದ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡಲು ಹೋಗಿದ್ದೆ ಎಂದರೆ ನಿಜ. ವಿಶ್ವನಾಥ ಇವರೇ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತಿದ್ದರಿಂದ ನಾನು ಆ ವ್ಯವಹಾರಗಳ ಬಗ್ಗೆ ಜಾಸ್ತಿ ತಲೆ ಹಾಕುತ್ತಿರಲಿಲ್ಲ ಎಂದರೆ ನಿಜ. ಜೂನ್ *2020* ರ ಸಭೆಯ ನಡಾವಳಿಯನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ ಎಂದರೆ ನಿಜ. ನಾನು ವಿಶ್ವಚೇತನ ವಿದ್ಯಾಸಂಸ್ಥೆಯ ನಿರ್ದೇಶಕನಲ್ಲ ಎಂದರೆ ನಿಜ. ಕೇವಲ ನಿರ್ದೇಶಕರಿಗೆ ಮಾತ್ರ ಸಭೆಯಲ್ಲಿ ಪಾಲ್ಗೊಳ್ಳುವ ಅಧಿಕಾರಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ನಮ್ಮನ್ನು ಕರೆಯುತ್ತಿದ್ದರು ಹೋಗುತ್ತಿದ್ದೆ. ಶಿಕ್ಷಕರ ಸಭೆಗಳು ಮತ್ತು ನಿರ್ದೇಶಕರ ಸಭೆಗಳು ಬೇರೆ ಬೇರೆ ನಡೆಯುತ್ತಿದ್ದವು ಎಂದರೆ ನಿಜ.

***2 ನೇ ಆರೋಪಿತರ ಪರ ವಕೀಲರು ಗೈರು ಹಾಜರಾಗಿದ್ದು 2 ನೇ ಆರೋಪಿತ ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಪರಿಗಣಿಸಲಾಯಿತು.***

***ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರ ಶ್ರೀ ಸಿ.ಪಿ ವಕೀಲರಿಂದಃ***

*6.* ನಾನು ಮೂಲತಃ *1999* ರಲ್ಲಿ ವಿಶ್ವಚೇತನ ಶಾಲೆಗೆ ಕೆಲಸಕ್ಕೆ ಸೇರಿದ್ದೆ. *1999* ರಲ್ಲಿ ಒಬ್ಬ ಮುನಿಸಿದ್ದೇಗೌಡ ಎನ್ನುವವರು ಅಧ್ಯಕ್ಷಕರಾಗಿದ್ದರು. ಅವರು ಎಷ್ಟು ವರ್ಷಗಳವರೆಗೆ ಅಧ್ಯಕ್ಷರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಪರಶಿವಮೂರ್ತಿಯವರು ಯಾವ ವರ್ಷದಲ್ಲಿ ಕಾರ್ಯದರ್ಶಿಯಾಗಿ ನೇಮಕವಾಗಿದ್ದರು ಎಂದು ಗೊತ್ತಿಲ್ಲ. *1999* ರಲ್ಲಿ ಪರಶಿವಮೂರ್ತಿಯವರು ಸರ್ಕಾರಿ ಪಿ.ಯು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದರು ಆದರೆ ಯಾವ ಊರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. *2015* ರಲ್ಲಿ ನಾನು ಪುನಃ ವಿಶ್ವಚೇತನ ಶಾಲೆಗೆ ಕೆಲಸಕ್ಕೆ ಸೇರಿದ್ದೆ. ಆ ಕಾಲಕ್ಕೆ *4* ನೇ ಆರೋಪಿತ ವಿಶ್ವನಾಥ.ಕೆ ಇವರು ಸಂಸ್ಥೆಯ ಕಾರ್ಯದರ್ಶಿಯಾಗಿದ್ದರು. ಆಗ ಚಾ.ಸಾ-*2* ಎಂ.ಎಂ.ನಾಗರಾಜು ಇವರು ಅಧ್ಯಕ್ಷರಾಗಿದ್ದರು. ನನ್ನನ್ನು ಶಾಲೆಗೆ ಸೇರಿಸಲು ಠರಾವು ಆಗಿತ್ತೊ ಇಲ್ಲವೂ ನನಗೆ ಗೊತ್ತಿಲ್ಲ. ಜೂನ್ *2015* ರಿಂದ ನಾನು ಅಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ್ದೆ. *2015* ರಿಂದ *2020* ರ ಅವಧಿಯಲ್ಲಿ ಪರಶಿವಮೂರ್ತಿ ಇವರು ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದು ನಿಮಗೆ ಗೊತ್ತಿದಿಯಾ ಎಂದರೆ ನನಗೆ ಗೊತ್ತಿಲ್ಲ. ನಾನು *5* ನೇ ಆರೋಪಿತ ಪರಶಿವ.ಪಿ ಇವರ ಮೂಲಕ ಪರಶಿವಮೂರ್ತಿಯವರಿಗೆ ಹಣ ಪಾವತಿ ಮಾಡುತ್ತಿದ್ದೆ.

*7.* ಪೋಲೀಸರ ಮುಂದೆ ಸಹ ನಾನು ಪರಶಿವ.ಪಿ ಇವರ ಮೂಲಕ ಪರಶಿವಮೂರ್ತಿಯವರಿಗೆ ಹಣ ಪಾವತಿ ಮಾಡುತ್ತಿದ್ದ ಬಗ್ಗೆ ಹೇಳಿದ್ದೆ. ನಾನು ಪೋಲೀಸರ ಮುಂದೆ ನನ್ನ *40,000/-* ಸಂಬಳದಲ್ಲಿ ಪ್ರತಿ ತಿಂಗಳು *15,000/-* ರೂಪಾಯಿಯನ್ನು ಪರಶಿವಮೂರ್ತಿಯವರಿಗೆ

ಪಾವತಿ ಮಾಡುತ್ತಿದ್ದೆ ಎಂದು ಹೇಳಿದ್ದೆ ಎಂದರೆ ನಿಜ. ಪರಶಿವ ಮೂಲಕ ಹಣ ಪಾವತಿ ಮಾಡುತ್ತಿದ್ದೆ ಎಂದು ಹೇಳಿಲ್ಲ ಎಂದರೆ ನಿಜ. ಹಣ ಕೊಟ್ಟವರ ಬಗ್ಗೆ ಮತ್ತು ಹಣ ಕೊಡದೇ ಇದ್ದವರ ಬಗ್ಗೆ ನಾನು ಲೆಕ್ಕಪತ್ರ ಇಟ್ಟಿಲ್ಲ. ಪರಶಿವಮೂರ್ತಿ ಆ ಬಗ್ಗೆ ಲೆಕ್ಕ ಇಟ್ಟಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ನಾನು ಮತ್ತು ಬೇರೆ ಶಿಕ್ಷಕರು ಪರಶಿವಮೂರ್ತಿಯವರಿಗೆ ಹಣ ಪಾವತಿ ಮಾಡುತ್ತಿದ್ದ ಬಗ್ಗೆ ಸರ್ಕಾರಕ್ಕೆ ಪತ್ರ ಅಥವಾ ದೂರು ಕೊಟ್ಟಿಲ್ಲ. ನಾವು ಹಣ ಕೊಟ್ಟ ಬಗ್ಗೆ ರಶೀದಿಯನ್ನು ಪಡೆದಿಲ್ಲ. ನಮಗೆ ಸಂಬಳದ ಹಣ ಬ್ಯಾಂಕ್ ಖಾತೆಯ ಮೂಲಕ ಪಾವತಿ ಆಗುತ್ತಿತ್ತು ಎಂದರೆ ನಿಜ. ಬ್ಯಾಂಕ್ ಖಾತೆಯಿಂದ ಹಣ ಡ್ರಾ ಮಾಡಿ ಪರಶಿವ ಇವರಿಗೆ ಪಾವತಿಸಿದ್ದಕ್ಕೆ ದಾಖಲೆ ಇಲ್ಲ. *2020* ರ ಜೂನ್ ನ ಸಭೆಯಲ್ಲಿ ಪರಶಿವಮೂರ್ತಿಯವರು ಯಾವ ಆಧಾರದ ಮೇಲೆ ಸಭೆಯಲ್ಲಿ ಹಾಜರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಪರಶಿವಮೂರ್ತಿ ಟ್ರಸ್ಟ್ ನಲ್ಲಿ ಯಾವ ಹುದ್ದೆ ಹೊಂದಿದ್ದರು ಎಂದು ಗೊತ್ತಿಲ್ಲ. *2020* ರ ಜೂನ್ ನಲ್ಲಿ ಯಾವುದೇ ಸಭೆ ನಡೆದಿಲ್ಲ ಮತ್ತು ಪರಶಿವಮೂರ್ತಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಆ ಸಭೆಯಲ್ಲಿ *2* ಶಾಲೆಯ ಶಿಕ್ಷಕರು ಭಾಗವಹಿಸಿದ್ದರು ಆ ಕಾಲಕ್ಕೆ *10–20* ಜನ ಸಭೆಯಲ್ಲಿ ಹಾಜರಿದ್ದೆವು. ಆ ಸಭೆಯಲ್ಲಿ ಹಾಜರಾತಿ ಪುಸ್ತಕಕ್ಕೆ ನನ್ನ ಸಹಿ ಪಡೆದಿಲ್ಲ. ಆ ಸಭೆಯಲ್ಲಿ ನಮ್ಮ ಶಾಲೆಯ ಶಿಕ್ಷಕರು ಮತ್ತು ಶಿಕ್ಷಕರಾಗುವ ಉದ್ದೇಶಕ್ಕೆ ಹಣ ಕೊಟ್ಟವರು ಭಾಗವಹಿಸಿದ್ದರು.

*8.* ಆ ಟ್ರಸ್ಟ್ ನ ಪದಾಧಿಕಾರಿಗಳ ಆಯ್ಕೆ ಯಾವಾಗ ನಡೆಯುತ್ತಿತ್ತು ಎಂದು ಗೊತ್ತಿಲ್ಲ. ನಾನು *2021* ರಲ್ಲಿ ಮುಖ್ಯ ಶಿಕ್ಷಕನಾಗಿ ನೇಮಕ ಗೊಂಡಿದ್ದೇನೆ. ಆದಾದ ಬಳಿಕ ಯಾವತ್ತು ಪದಾಧಿಕಾರಿಗಳ ಚುನಾವಣೆ ನಡೆದಿಲ್ಲ. ನಾನು ಮುಖ್ಯ ಶಿಕ್ಷಕನಾದ ಬಳಿಕವೂ ಸಹ ನಾಗರಾಜು ಇವರು ಯಾವ ವರ್ಷದಿಂದ ಅಧ್ಯಕ್ಷರಾಗಿದ್ದಾರೆ ಎಂದು ದಾಖಲೆ ನೋಡಿಲ್ಲ. ಚಾ.ಸಾ–*2* ನಾಗರಾಜು ಮತ್ತು ಮೃತ ಪರಶಿವಮೂರ್ತಿ ಮದ್ಯೆ ಕೋರ್ಟ್ ನಲ್ಲಿ ವ್ಯಾಜ್ಯ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಟ್ರಸ್ಟ್ ನ ಮ್ಯಾನೇಜ್ ಮೆಂಟ್ ಕುರಿತು ಚಾ.ಸಾ–*2* ನಾಗರಾಜು ಮತ್ತು ಮೃತ ಪರಶಿವಮೂರ್ತಿ ಮದ್ಯೆ ಕೋರ್ಟ್ ನಲ್ಲಿ ವ್ಯಾಜ್ಯ ಇತ್ತು

ಎಂದರೆ ನನಗೆ ಗೊತ್ತಿಲ್ಲ. ನಾನು ಮುಖ್ಯ ಶಿಕ್ಷಕನಾದ ಬಳಿಕ ಸಿವಿಲ್ ಕೋರ್ಟ್ ಗೆ ಯಾವುದೇ ದಾಖಲೆಗಳನ್ನು ಒದಗಿಸಿಲ್ಲ. *4* ನೇ ಆರೋಪಿತ ವಿಶ್ವನಾಥ ಇವರು ಸಭೆಯ ಕಾಲಕ್ಕೆ ಪರಶಿವಮೂರ್ತಿಯವರಿಗೆ ರಾಡಿನಿಂದ ಹೊಡೆದು ಕೊಲೆ ಮಾಡುತ್ತೇನೆ ಎಂದು ಹೇಳಿದ್ದು ಸಭೆಯ ನಡಾವಳಿಯಲ್ಲಿ ನಮೂದು ಆಗಿಲ್ಲ. ಆರೋಪಿತರನ್ನು ಅರೆಸ್ಟ್ ಮಾಡಿದ ವಿಚಾರ ನನಗೆ ಯಾವಗ ಗೊತ್ತಾಗಿತ್ತು ಎಂದು ನನಗೆ ನೆನಪಿಲ್ಲ. ದಿಃ*04.11.2020* ಕ್ಕಿಂತ ಅಂದಾಜು *1* ವಾರಕಿಂತ ಮೊದಲು ಆ ಬಗ್ಗೆ ಗೊತ್ತಾಗಿರಬಹುದು. ಆ ಬಗ್ಗೆ ಗೊತ್ತಾದ ಕೂಡಲೇ ನಾನು ಪೋಲೀಸರ ಮುಂದೆ ನನಗೆ ಗೊತ್ತಿರುವ ವಿಷಯಗಳನ್ನು ಹೇಳಿರಲಿಲ್ಲ. ಸಭೆಯ ಕಾಲಕ್ಕೆ ನಡೆದ ಗಲಾಟೆ ಕುರಿತು ಮೊದಲ ಬಾರಿಗೆ ಪೋಲೀಸರಿಗೆ ಯಾರು ಹೇಳಿದ್ದರು ಎಂದು ಗೊತ್ತಿಲ್ಲ. ದಿಃ *04.11.2020* ಕ್ಕಿಂತ *1* ವಾರ ಮುಂಚೆ ನನ್ನನ್ನು ವಿಚಾರಣೆಗೆ ಕರೆದಿದ್ದರು. ಆದರೆ ಆ ಕಾಲಕ್ಕೆ ನೋಟೀಸ್ ಕೊಟ್ಟಿರಲಿಲ್ಲ. ನನಗೆ ಪೋ.ಠಾಣೆಯಿಂದ ಪೋನ್ ಮಾಡಿ ಕರೆದಿದ್ದರು. ಪೋಲೀಸರು ನಮ್ಮೆಲ್ಲರ ಪೋನ್ ನಂಬರ್ ಮತ್ತು ವಾಹನದ ನಂಬರ್ ಗಳನ್ನು ಬರೆದು ಕೊಂಡಿದ್ದರು. ಅವುಗಳನ್ನು ಪಡೆಯುವ ಕಾಲಕ್ಕೆ ***enquiry*** ಮಾಡಿದ್ದರು ಆದರೆ ಹೇಳಿಕೆ ಪಡೆದಿದರಲಿಲ್ಲ. ಒಬ್ಬ ರಾಜಣ್ಣ ಎನ್ನುವ ಅಧಿಕಾರಿ ನನ್ನ ***enquiry*** ಮಾಡಿದ್ದರು.

*9.* ಪರಶಿವಮೂರ್ತಿಯವರು ಮೃತರಾಗಿ *15* ದಿನಗಳ ನಂತರ ನಾನು ಮುಖ್ಯ ಶಿಕ್ಷಕನಾಗಿ ನೇಮಕಗೊಂಡಿದ್ದೇನೆ. ಚಾ.ಸಾ–*2* ನಾಗರಾಜು ಇವರು ಹೇಳಿದಂತೆ ಹೇಳಿಕೆ ಕೊಟ್ಟರೆ ಮುಖ್ಯ ಶಿಕ್ಷಕನಾಗಿ ನೇಮಕ ಮಾಡುತ್ತೇವೆ ಎಂದು ಆಮಿಷ ಒಡ್ಡಿದ್ದರಿಂದ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. *2015* ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ನನಗಿಂತ ಹಿರಿಯ ಶಿಕ್ಷಕರು ಯಾರು ಇರಲಿಲ್ಲ. ಆ ಕಾಲಕ್ಕೆ ನನ್ನೊಂದಿಗೆ ವಿಶ್ವನಾಥ, ಪರಶಿವ, ವಿಜಯ ಮತ್ತು ಬಾಲಚಂದ್ರ ಹೆಗ್ಡೆ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ್ದೇವು. ಬಾಲಚಂದ್ರ ಹೆಗ್ಡೆ ಯವರು ಮತ್ತು ನಾನು ಒಂದೇ ದಿನ ಕೆಲಸಕ್ಕೆ ಸೇರಿದ್ದೆವು. ವಿಶ್ವನಾಥ ಮತ್ತು ಪರಶಿವ ನನಗಿಂತ ಮುಂಚೆ ಕೆಲಸ ಮಾಡುತ್ತಿದ್ದರು. ಅವರಿಬ್ಬರು

ಹಿರಿಯರಾಗಿದ್ದರಿಂದ ನನಗೆ ಮುಖ್ಯ ಶಿಕ್ಷಕನಾಗುವ ಅರ್ಹತೆ ಇಲ್ಲದೇ ಇದ್ದರು ಸುಳ್ಳು ಹೇಳಿ ನಾನು ಮುಖ್ಯ ಶಿಕ್ಷಕ ಹುದ್ದೆ ಗಿಟ್ಟಿಸಿಕೊಂಡಿದ್ದೆ ಎಂದರೆ ಸರಿಯಲ್ಲ. *1999* ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ನನಗಿಂತ ಕಿರಿಯರು ಮುಖ್ಯ ಶಿಕ್ಷಕರಾಗಿದ್ದು ನನಗೆ ಬೇಜಾರಾಗಿದ್ದರಿಂದ ಆ ದ್ವೇಷದ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಕಿ ವೇತನ ಹಣ ವೈಯಕ್ತಿಕ ಖಾತೆಗೆ ಪಾವತಿ ಆಗಿತ್ತು. ಆ ಹಣವನ್ನು ವಿಶ್ವನಾಥ ಅಥವಾ ಪರಶಿವಮೂರ್ತಿಗೆ ಅಥವಾ ಆಡಳಿತ ಮಂಡಲಿಗೆ ಪಾವತಿಸಿದ ಬಗ್ಗೆ ದಾಖಲೆ ಇಲ್ಲ. ಈಗ *4* ಮತ್ತು *5* ನೇ ಆರೋಪಿತರು ಶಾಲೆಗೆ ಮರುನೇಮಕಗೊಂಡಿದ್ದಾರೆ ಎಂದರೆ ನಿಜ. ವಿಶ್ವನಾಥ ಇವರು ಪುನಃ ಮುಖ್ಯ ಶಿಕ್ಷಕರಾಗುತ್ತಾರೆ ಎನ್ನುವ ಕಾರಣಕ್ಕೆ ಅವರ ವಿರುದ್ಧ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***1* ನೇ ಆರೋಪಿತರ ಉಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

***5* ನೇ ಆರೋಪಿತರ ಪರ ವಕೀಲರು *1, 3* ಮತ್ತು *4* ನೇ ಆರೋಪಿತರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು